ಓ ಎಸ್.   1/2012                                                     ಪಿಡಬ್ಲೂ : 1 ಜಾಫರ್

ದಿನಾಂಕಃ 21.11.2023 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು : 3 ನೇ ಪ್ರತಿವಾದಿ ಪರ : ಶ್ರೀ ಎಂ ಡಿ ವಕೀಲರಿಂದಃ**

ನನ್ನ ತಂದೆ ಮರಣ ಹೊಂದಿ 35 ರಿಂದ 40 ವರ್ಷ ಆಗಿರುತ್ತದೆ. ನನ್ನ ತಂದೆ ತನ್ನ ಜೀವಿತ ಕಾಲದಲ್ಲಿ 1 ನೇ ಪ್ರತಿವಾದಿಯ ಕರಾರು ಪತ್ರವನ್ನು ಪ್ರಶ್ನಿಸಿರುವುದಿಲ್ಲ. ಕ್ರಯ ಪತ್ರವಾದ 15 ವರ್ಷದ ನಂತರ ನನಗೆ  ಕ್ರಯವಾಗಿರುವ ವಿಚಾರ ನನಗೆ ತಿಳಿದು ಬಂದಿರುತ್ತದೆ. ನಮ್ಮ ಜಮೀನಿನ ಬಳಿ ಯಾರೋ ಮಾರಾಟ  ಮಾಡುತ್ತೇನೆ ಎಂದು ಬಂದಾಗ ಸದರಿ ವಿಚಾರ ತಿಳಿದು ಬಂದಿರುತ್ತದೆ. ನನ್ನ ತಂದೆ ಆಗ ಜೀವಂತವಾಗಿರಲಿಲ್ಲ. ಸದರಿ ವಿಚಾರ ತಿಳಿದು ಸುಮಾರು 5-6 ವರ್ಷದ ನಂತರ ಈ

ಕೇಸನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇನ್ನು ಹೆಚ್ಚು ಅವಧಿಯಾಗಿದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಆದ ಕ್ರಯ ಪತ್ರ ಮೋಸದಿಂದ ಆಗಿದೆ ಅದನ್ನು ರದ್ದು ಮಾಡಬೇಕೆಂದು ಈ ದಾವೆಯಲ್ಲಿ ಕೇಳಿರುತ್ತೇನೆ. ಕ್ರಯ ಪತ್ರ ಮೋಸದಿಂದ ಆಗಿದೆ ಎಂದು ನನಗೆ 10-15 ವರ್ಷದ ಹಿಂದೆ ತಿಳಿದಿದ್ದು, ತದನಂತರ ಈ ಕೇಸನ್ನು ನಾನು ಸಲ್ಲಿಸಿರುತ್ತೇನೆ. ನನಗೆ ಈ ಆಸ್ತಿಯಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅದು ನಮ್ಮದೇ ಆಸ್ತಿ ಎಂದು ನುಡಿಯುತ್ತಾರೆ. ಕ್ರಯ ಪತ್ರ ಮೋಸದ ದಾಖಲೆ ಎಂದು ನಾನು signature difference ಇಂದ ಕಂಡು ಹಿಡಿದಿರುತ್ತೇನೆ. ಹಾಗೂ 3-4 ಜನರಿಂದ ತಿಳಿದುಕೊಂಡಿರುತ್ತೇನೆ. ನಾನು ಕ್ರಯ ಪತ್ರದಲ್ಲಿರುವ ನನ್ನ ತಂದೆಯ ಸಹಿ ಮತ್ತು ನಿಜವಾಗಿ ನನ್ನ ತಂದೆಯ ಸಹಿಗೆ ವ್ಯತ್ಯಾಸ ಇದೆ ಎಂದು ಹಳೆಯ ಒಂದು ವಿಭಾಗ ಪತ್ರವನ್ನು ನೋಡಿ ತಿಳಿದುಕೊಂಡಿರುತ್ತೇನೆ. ಸದರಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕ್ರಯ ಪತ್ರವನ್ನು ಮೋಸ ಮಾಡಿ ಬೇಗಂ ಷಾ ಸೃಷ್ಟಿಸಿರುತ್ತಾರೆ. ಫೋರ್ಜರಿ ಮಾಡಿದ್ದಾರೆ ಎಂದು ನಾನು ಬೇಗಂ ಷಾ ವಿರುದ್ದ ಯಾವುದೇ ಕ್ರಿಮಿನಲ್ ಮೊಕದ್ದಮೆ ಹಾಗೂ ದೂರನ್ನು ದಾಖಲಿಸಿರುವುದಿಲ್ಲ. ಹೇಗಾದರೂ ಮಾಡಿ ಆಸ್ತಿಯನ್ನು ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ನಾನು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

**1(ಎ) ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.